O.S . No.42/2016 P.W. 1 Dated :02-04-2024.

ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.

ಪಾಟೀ ಸವಾಲು: ಶ್ರೀ.ಡಿ.ಎಂ.ಕೆ. ವಕೀಲರಿಂದಃ

ಜಮೀನನ್ನು ನೊಂದಾಯಿಸಿಕೊಡುವಂತೆ ದಾವೆ ಹೂಡಿರುತ್ತೇನೆ. ಧರ್ಮಪುರಿ ಗ್ರಾಮದ ಸ.ನಂ.234 ಕ್ಕೆ ಸಂಬಂಧಿಸಿದಂತೆ ದಾವೆ ಹೂಡಿರುತ್ತೇನೆ. ಧರ್ಮಪುರಿ ಗ್ರಾಮವನ್ನು ಈ ಮೊದಲು ಬ್ಯಾಬ ಫಾರೆಸ್ಟ್ ಎಂದು ಕರೆಯುತ್ತಿದ್ದು , ಈಗ ಧರ್ಮಪುರಿ ಎಂದು ಕರೆಯುತ್ತಿದ್ದಾರೆ. ರಸ್ತೆ ಕಳೆದು 3 ಎಕರೆ 30 ಗುಂಟೆ ಜಮೀನಿಗೆ ದಾವೆ ಹೂಡಿರುತ್ತೇನೆ. ಜಮೀನಿನ ಪೂರ್ವ ದಿಕ್ಕಿನಲ್ಲಿ 10 ಗುಂಟೆ ಜಮೀನು ರಸ್ತೆಗೆ ಹೋಗಿರುತ್ತದೆ. 2005 ನೇ ಇಸವಿಯಲ್ಲಿ ರಸ್ತೆಗಾಗಿ ಜಮೀನನ್ನು ಕಳೆದಿರುತ್ತಾರೆ. ರಸ್ತೆಗಾಗಿ ಜಮೀನನ್ನು ಕಳೆದಿದ್ದು , ಅದು ಯಾವ ರೀತಿ ಕಳೆದಿರುತ್ತಾರೆಂದು ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನ ಪೂರ್ವ ದಿಕ್ಕಿನಲ್ಲಿ 10 ಗುಂಟೆ ಜಮೀನು ರಸ್ತೆಗೆ ಹೋಗಿರುವ ಬಗ್ಗೆ ದಾವೆಯಲ್ಲಿ ನಾನು ನಮೂದಿಸಿಕೊಂಡಿರುವುದಿಲ್ಲ. ನಾವು ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಕರಾರು ಬರೆದುಕೊಟ್ಟ ನಂತರ ರಸ್ತೆಗಾಗಿ 10 ಗುಂಟೆ ಜಮೀನು ಹೋಗಿರುತ್ತದೆ. ರಸ್ತೆಗಾಗಿ 10 ಗುಂಟೆ ಜಮೀನನ್ನು ಕಳೆದಿರುವ ಬಗ್ಗೆ ದಾವೆಯಲ್ಲಿ ನಮೂದಿಸಿಕೊಳ್ಳಲು ತೊಂದರೆ ಇತ್ತೇ ಎಂದರೆ ಸಾಕ್ಷಿಯು ನನಗೆ ಉಷಾರಿಲ್ಲದ ಕಾರಣ ನಮೂದಿಸಿರುವುದಿಲ್ಲ ಎಂದು ನುಡಿಯುತ್ತಾರೆ. ನನಗೆ ಆಗಾಗ ಅನಾರೋಗ್ಯ ಕಾಡುತ್ತಿರುತ್ತದೆ. ನನಗೆ ಹೃದಯರೋಗ ತೊಂದರೆ ಇರುತ್ತದೆ. ನನಗೆ ಹಉದಯರೋಗ ವಿರುವ ಬಗ್ಗೆ ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ನನಗೆ ಅನಾರೋಗ್ಯ ಇರುವುದಿಲ್ಲ ಎಂದರೆ ಸರಿಯಲ್ಲ.

ವೀರಪ್ಪ , ಮಲ್ಲಿಕ, ಜನಾರ್ಧನ್ ಮತ್ತು ಸುಶೀಲ ರವರ ವಿರುದ್ಧ ದಾವೆ ಹೂಡಿರುತ್ತೇನೆ. ದಿಃ22-02-2005 ರಂದು ಪ್ರತಿವಾದಿಗಳು ಕರಾರು ಒಪ್ಪಂದವನ್ನು ಬರೆದುಕೊಟ್ಟಿರುತ್ತಾರೆ. ದಿಃ22-02-2005 ರ ಕರಾರು ಒಪ್ಪಂದದ ದಾಖಲೆಯನ್ನು ನಮ್ಮ ವಕೀಲರಿಗೆ ನೀಡಿರುತ್ತೇನೆ. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವ ಬಗ್ಗೆ ನನಗೆ ತಿಳಿದಿರುವುದಿಲ್ಲ. ದಾವೆ ಹೂಡುವ ಸಮಯದಲ್ಲಿ ನಮ್ಮ ವಕೀಲರಿಗೆ

ಕರಾರು ಪತ್ರವನ್ನು ನೀಡಿದ್ದೆನು . ದಿಃ22-02-2005 ರಂದು ಯಾವುದೇ ರೀತಿ ಕರಾರಾಗಿರುವುದಿಲ್ಲ ಎಂದರೆ ಸರಿಯಲ್ಲ. ಆ ದಿನಾಂಕದಂದು ಕರಾರು ಆಗದೇ ಇದ್ದ ಕಾರಣ ಆ ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಕರಾರನ್ನು ಹೊರತುಪಡಿಸಿ ಜಿ ಪಿ ಎ ಯನ್ನು ಬರೆದುಕೊಟ್ಟಿರುತ್ತಾರೆ ಹಾಗೂ ಸ್ವತ್ತಿನ ಸ್ವಾಧೀನವನ್ನು ನೀಡಿರುತ್ತಾರೆ. ಜಿ ಪಿ ಎ ಮತ್ತು ಕರಾರಿನ ಆಧಾರದ ಮೇಲೆ ಸ್ವತ್ತಿನ ಸ್ವಾಧೀನವನ್ನು ನೀಡಿರುತ್ತಾರೆ. ದಿಃ22-02-2005 ರ ಕರಾರು ಪತ್ರದ ಮುಖಾಂತರ ಪ್ರತಿವಾದಿಗಳು ಸ್ವತ್ತಿನ ಸ್ವಾಧೀನವನ್ನು ನೀಡಿರುತ್ತಾರೆ. ವಾದಪತ್ರವನ್ನು ತಯಾರಿಸಲು ವಕೀಲರಿಗೆ ನಾನೇ ಮಾಹಿತಿಯನ್ನು ನೀಡಿರುತ್ತೇನೆ. ದಿಃ22-02-2005 ರ ಕರಾರು ಪತ್ರದ ಮುಖಾಂತರ ನನಗೆ ದಾವಾ ಸ್ವತ್ತಿನ ಸ್ವಾಧೀನ ನೀಡಿರುತ್ತಾರೆ ಎಂದು ನನ್ನ ದಾವೆಯಲ್ಲಿ ನಮೂದಿಸಿರುತ್ತೇನೆ. 2 ಲಕ್ಷದ 35 ಸಾವಿರ ರೂ.ಗಳಿಗೆ ಕರಾರು ಒಪ್ಪಂದವಾಗಿರುತ್ತದೆ. ಅದರ ಪೈಕಿ 2 ಲಕ್ಷದ 25 ಸಾವಿರ ರು ಾಗಳ ಮುಂಗಡ ಹಣವನ್ನು ಪಾವತಿಸಿರುತ್ತೇನೆ. ಆ ಕರಾರಿಗೆ 2 ನೇ ಪ್ರತಿವಾದಿ ಮಾತ್ರ ಸಹಿ ಹಾಕಿದರು , ಉಳಿಕೆ ಪ್ರತಿವಾದಿಗಳು ತಕ್ಷಣದಲ್ಲಿಯೇ ಕ್ರಯಪತ್ರವನ್ನು ಮಾಡಿಕೊಡುತ್ತೇವೆಂದು ತಿಳಿಸಿ ಕರಾರಿಗೆ ಸಹಿ ಹಾಕಲಿಲ್ಲ. ನಾನು ಹಣವನ್ನು 2 ನೇ ಪ್ರತಿವಾದಿ ಸುಶೀಲಮ್ಮ ಮತ್ತು ಆಕೆಯ ಗಂಡ ವೀರಪ್ಪನವರಿಗೆ ನೀಡಿರುತ್ತೇನೆ. ಹಣ ಪಡೆದುಕೊಳ್ಳುವಾಗ 1 ನೇ ಪ್ರತಿವಾದಿ ವೀರಪ್ಪನವರು ಹಾಜರಿದ್ದರೂ ಸಹ ಏತಕ್ಕಾಗಿ ಅವರ ಸಹಿಯನ್ನು ಪಡೆದುಕೊಂಡಿರಲಿಲ್ಲ ಎಂದರೆ ಸಾಕ್ಷಿಯು ವೀರಪ್ಪನವರು ನನ್ನ ಮೇಲೆ ನಂಬಿಕೆ ಇಡು ಎಂದು ನನಗೆ ತಿಳಿಸಿದ ಕಾರಣ ಅವರ ಸಹಿಯನ್ನು ಕರಾರು ಪತ್ರಕ್ಕೆ ಪಡೆದುಕೊಂಡಿರಲಿಲ್ಲ. ಆ ಕರಾರು ಪತ್ರಕ್ಕೆ ಸಾಕ್ಷಿದಾರರ ಸಹಿಯನ್ನು ಪಡೆದುಕೊಂಡಿರುವುದಿಲ್ಲ . ಕರಾರನ್ನು ಹಾಸನದ ನೋಟರಿಯವರಿಂದ ತಯಾರಿಸಲಾಗಿರುತ್ತದೆ. ನೋಟರಿ ವಕೀಲರ ಹೆಸರು ನನಗೆ ಈಗ ನೆನಪಾಗುತ್ತಿಲ್ಲ. ಎಷ್ಟು ರೂ.ನ ಸ್ಟಾಂಪ್ ಪೇಪರ್ ನಲ್ಲಿ ಕರಾರನ್ನು ತಯಾರಿಸಲಾಗಿತ್ತು ಎಂದರೆ ಸಾಕ್ಷಿಯು ಸ್ಟಾಂಪ್ ಪೇಪರಿನ ಮೊತ್ತವನ್ನು ನಾನು ಮರೆತಿರುತ್ತೇನೆ ಎಂದು ನುಡಿಯುತ್ತಾರೆ. ನಂತರದಲ್ಲಿ ಸಾಕ್ಷಿಯು ವಾಸುದೇವ್ ಎಂಬ ನೋಟರಿಯವರ ಮುಖಾಂತರ ಕರಾರನ್ನು ತಯಾರಿಸಲಾಗಿತ್ತು ಎಂದು ನುಡಿಯುತ್ತಾರೆ. ಜಿ ಪಿ ಎ ಯನ್ನೂ ಸಹಾ ವಕೀಲರಾದ ವಾಸುದೇವ್ ರವರು ತಯಾರಿಸಿದರು. 1 ರಿಂದ 4 ನೇ ಪ್ರತಿವಾದಿಗಳು ಜಿ ಪಿ ಎ ಯನ್ನು

ಬರೆದುಕೊಟ್ಟಿದ್ದರು. ಜಿ ಪಿ ಎ. ಗೆ ಯಾರೂ ಸಾಕ್ಷಿದಾರರಾಗಿ ಸಹಿ ಮಾಡಿರುವುದಿಲ್ಲ. ನಿಪಿ-3 ರ ಜಿ ಪಿ ಎ ಗೆ 3 ಜನ ಪ್ರತಿವಾದಿಗಳು ಸಹಿ ಹಾಕಿದ್ದು , ಒಬ್ಬ ಪ್ರತಿವಾದಿ ಸಹಿ ಹಾಕಿರುವುದಿಲ್ಲ , ಅವರಲ್ಲಿ ಯಾರು ಸಹಿ ಹಾಕಿರುವುದಿಲ್ಲ ಎಂದು ನನಗೆ ಈಗ ನೆನಪಿರುವುದಿಲ್ಲ. ನಿಪಿ-3 ರಲ್ಲಿ 1, 3 ಮತ್ತು 4 ನೇ ಪ್ರತಿವಾದಿಗಳ ಹೆಸರು ನಮೂದಾಗಿರುತ್ತದೆ ಎಂದರೆ ಸರಿ . 3 ಜನರ ಹೆಸರಿನಲ್ಲಿ ಜಿ ಪಿ ಎ ತಯಾರಿಸಲಾಗಿದ್ದು , 4 ನೆ ಯವರ ಹೆಸರಿನಲ್ಲಿ ಹೇಗೆ ಜಿ ಪಿ ಎ ಯನ್ನು ತಯಾರಿಸಲಾಗಿತ್ತು ಎಂದರೆ ಸಾಕ್ಷಿಯು ಅವರನ್ನು ಕರೆದುಕೊಂಡು ಬರುತ್ತೇವೆ ಎಂದು ತಿಳಿಸಿದ ಕಾರಣ ಜಿ ಪಿ ಎ ಯನ್ನು ಅವರ ಹೆಸರಿನಲ್ಲಿ ತಯಾರಿಸಲಾಗಿತ್ತು ಎಂದು ನುಡಿಯುತ್ತಾರೆ. ನಂತರದಲ್ಲಿಯೂ ಸಹಾ ಆ ಮತ್ತೊಬ್ಬರು ನೋಟರಿ ವಕೀಲರ ಬಳಿ ಆ ದಿನ ಬಂದಿರಲಿಲ್ಲ. ನಾನು ವೀರಪ್ಪ ಮತ್ತು ಸುಶೀಲಮ್ಮನವರ ಮನೆ ಬಳಿ ಹೋಗಿ ದಾಖಲೆಗೆ ಸಹಿ ಮಾಡಿಕೊಡಿ ನೊಂದಣಿ ಮಾಡಿಸಿಕೊಡಿ ಎಂದು ಕೇಳಿದೆನು , ಆದರೆ ಅವರು ನಂತರದಲ್ಲಿ ನೊಂದಣಿ ಮಾಡಿಕೊಡುತ್ತೇವೆ ಎಂದು ಕಾಲಹರಣ ಮಾಡಿ ನೊಂದಣಿ ಮಾಡಿಸಿಕೊಡಲಿಲ್ಲ. ವೀರಪ್ಪ ಮತ್ತು ಸುಶೀಲಮ್ಮನವರನ್ನು ಜಿ ಪಿ ಎ ಗೆ ಸಹಿ ಮಾಡಿಕೊಡಿ ಎಂದು ಕೋರಿಕೊಂಡ ಬಗ್ಗೆ ನಮೂದಿಸಿಕೊಂಡಿದ್ದೀರಾ ಎಂದರೆ ಆ ರೀತಿ ನಮೂದಿಸಿರುವುದಿಲ್ಲ ಎಂದು ನುಡಿಯುತ್ತಾರೆ. ಆ ರೀತಿ ನಮೂದಿಸಿಕೊಳ್ಳಲು ನನಗೆ ತೊಂದರೆ ಇರಲಿಲ್ಲ, ಸಾಕ್ಷಿಯು ಮುಂದುವರಿದು ತದನಂತರದಲ್ಲಿ ದಿಃ13-12-2006 ರಂದು 1 ರಿಂದ 4 ನೇ ಪ್ರತಿವಾದಿಗಳು ಬೇರೊಂದು ಕರಾರು ಪತ್ರವನ್ನು ಹೆಚ್ಚಿನ ಮೊತ್ತಕ್ಕಾಗಿ ಬರೆದುಕೊಟ್ಟಿದ್ದು , ಅದಕ್ಕೆ ಸಾಕ್ಷಿದಾರರೂ ಸಹಾ ಸಹಿ ಮಾಡಿರುತ್ತಾರೆ. ಹಳೆಯ ಕರಾರು ಮತ್ತು ಹೊಸ ಕರಾರನ್ನು ಸೇರಿಸಿ ಒಟ್ಟು 4 ಲಕ್ಷದ 85 ಸಾವಿರ ರೂ.ಗಳಿಗೆ ಮಾತುಕತೆಯಾಗಿದ್ದು , ಅದರ ಪೈಕಿ ಒಟ್ಟು 4 ಲಕ್ಷದ 75 ಸಾವಿರ ರೂ.ಗಳನ್ನು ಮುಂಗಡವಾಗಿ ನೀಡಿರುತ್ತೇನೆ, ಉಳಿಕೆ 10 ಸಾವಿರ ರೂ.ಗಳು ಮಾತ್ರ ಬಾಕಿ ಇರುತ್ತದೆ . 2 ನೇ ಕರಾರಿನ ವೇಳೆಯಲ್ಲಿ 2 ಲಕ್ಷದ 50 ಸಾವಿರ ರೂ.ಗಳ ಮುಂಗಡ ಹಣವನ್ನು ನೀಡಿರುತ್ತೇನೆ. 2 ನೇ ಕರಾರಿನ ಪ್ರಕಾರ 2 ಲಕ್ಷದ 50 ಸಾವಿರ ರೂ.ಗಳ ಮುಂಗಡ ಹಣ ನೀಡಿರುವ ಬಗ್ಗೆ ದಾವೆಯಲ್ಲಿ ನಮೂದಿಸಿದ್ದೀರಾ ಎಂದರೆ ಸಾಕ್ಷಿಯು ಅದನ್ನು ನಮ್ಮ ವಕೀಲರು ನಮೂದಿಸಿರಬಹುದು , ಆದರೆ ಅದನ್ನು ನನಗೆ ಓದಿ ಹೇಳಿರಲಿಲ್ಲ ಎಂದು ನುಡಿಯುತ್ತಾರೆ. ಮುಖ್ಯ ವಿಚಾರಣಾ ಪ್ರಮಾಣ

ಪತ್ರಿಕೆಯ ಅಂಶಗಳನ್ನು ನಿಮ್ಮ ವಕೀಲರು ಬರೆದಿದ್ದು , ಅದನ್ನು ನನಗೆ ಓದಿ ಹೇಳಿರುವುದಿಲ್ಲ ಎಂದರೆ ಸರಿ .

ಮುಂದುವರಿದ ಪಾಟೀಸವಾಲಿಗಾಗಿ ಕಾಲಾವಕಾಶ ಕೋರಿದ್ದು , ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ .

ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಆಲೂರು.